



# ಸಿಕಾಡಾ

■ ಚಿತ್ರ ಲೇಖನ:

ಮಂಜುನಾಥ

ಕಾಡಲ್ಲಿ ನಡೆಯುವಾಗ ಮರ–ಗಿಡಗಳಿಂದ ಮೇಲಿಂದ ಮೇಲೆ ಟ್ರೀ, ಟ್ರೀ, ಟ್ರೀ ಎಂದು ಹೊರಡುವ ಶಬ್ದವನ್ನು ನೀವು ಕೇಳಿಯೇ ಇರುತ್ತೀರಿ. ಕಿವಿಗೆ ಇಂಪು ನೀಡುವ ಸಂಗೀತವಂತೂ ಅದು ಅಲ್ಲವೇ ಅಲ್ಲ, ಆದರೆ ಹೃದಯದ ಬಡಿತವನ್ನು ಹೆಚ್ಚಿಸುವುದು ಖಂಡಿತಾ. ಈ ಶಬ್ದವು ದೀರ್ಘಾವಧಿಯಾಗಿದ್ದು, ಇದರಲ್ಲಿ ಏರಿಳಿತಗಳೂ ಕೇಳಿಸಬಹುದು. ಸಿಕಾಡಾ ಎಂಬ ಕೀಟಗಳು ಈ ಕರ್ಕಶ ಚೀರಾಟದ ಶಬ್ದವನ್ನು ಉಂಟು ಮಾಡುತ್ತವೆ.

ಇಲ್ಲೊಂದು ತಾರತಮ್ಯವಿದೆ. ಕೇವಲ ಗಂಡು ಸಿಕಾಡಾ ಕೀಟಗಳಿಗೆ ಮಾತ್ರ ಈ ರೀತಿ ಶಬ್ದ ಮಾಡಲು ಬರುತ್ತದೆ. ಈ ಗಂಡು ಕೀಟದ ಚೀರಾಟಕ್ಕೆ ಹೆಣ್ಣು ಕೀಟ ಮನಸೋಲಬಹುದು!

ಶಬ್ದ ಉಂಟು ಮಾಡುವ ಅಂಗವು ಕೀಟದ ಹಿಂಗಾಲುಗಳ ತುಸು ಮೇಲ್ಭಾಗದ ಪಾರ್ಶ್ವಗಳಲ್ಲಿರುತ್ತದೆ. ಪಾರದರ್ಶಕ ಪೊರೆಯಂತಿರುವ ಈ ಭಾಗಕ್ಕೆ ಶಕ್ತಿಶಾಲಿ ಸ್ನಾಯುಗಳು ಜೋಡಿಸಲ್ಪಟ್ಟಿರುತ್ತವೆ. ಸ್ನಾಯುಗಳ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯಿಂದ ಪೊರೆಯಲ್ಲಿ ಕಂಪನ ಉಂಟಾಗಿ ಈ ಕರ್ಕಶ ಶಬ್ದ ಹೊರಬರುತ್ತದೆ.

ಸಿಕಾಡಗಳು ಮಣ್ಣೊಳಗೇ ಹುಟ್ಟಿ ಅಲ್ಲಿಯೇ ಸಾಯುವುದೂ ಉಂಟು. ಸಿಕಾಡಾದ ಮರಿಗಳು ಮರದ ಬುಡದ ಮಣ್ಣಿನಲ್ಲಿ ವಾಸಿಸುತ್ತವೆ. ಇವುಗಳ ಬೆಳೆವಣಿಗೆಯ ಸಾಮಾನ್ಯ ಅವಧಿ ಎರಡರಿಂದ ಮೂರು ವರ್ಷಗಳು, ಕೆಲವು ಮರಿಗಳ ಬೆಳವಣಿಗೆಯ ಕಾಲಾವಧಿ ಹದಿಮೂರು ವರ್ಷದವರೆಗೋ ಇರುವುದಿದೆ!

ಒಂದು ಮರದ ಬುಡದಿಂದ ನಲ್ವತ್ತು ಸಾವಿರಕ್ಕಿಂತಲೂ ಹೆಚ್ಚು ಮರಿಗಳು ಹೊರಬಂದ ಉದಾಹರಣೆಗಳಿವೆ!



